ನಿಜವಾದ ಬಿಕ್ಕಟ್ಟು

ಜೆ.ಕೃಷ್ಣಮೂರ್ತಿ

ನಿಜವಾದ ಬಿಕ್ಕಟ್ಟು

ನಿಜವಾದ ಬಿಕ್ಕಟ್ಟು ಇತಿಹಾಸವು ಮಾನವ ನಿರ್ಮಿತ ಮಹಾ ದುರಂತಗಳ ಕಥನವೆಂದು ಭಾಸವಾಗುತ್ತದೆ. ಈ ದುರಂತಗಳು ನಿಯತವಾಗಿ, ಮರಳಿ ಮರಳಿ, ತಪ್ಪದೆ ಸಂಭವಿಸುತ್ತಿವೆ ಎಂದು ತೋರುತ್ತದೆ. ಜಗತ್ತಿಗೆ ಆಘಾತ ಹಾಗು ಆಶ್ಚರ್ಯ ಉಂಟಾಗುವ ಹಾಗೆ ಮತ್ತು ಪಂಡಿತರ ಹಾಗು ತಜ್ಞರ ಎಲ್ಲ ಊಹೆಗಳನ್ನು ತಲೆಕೆಳಗು ಮಾಡುವ ಹಾಗೆ ಘಟಿಸುತ್ತಿವೆ. ಬುದ್ಧಿ, ತರ್ಕ ಮತ್ತು ವಿವೇಚನೆಯ ಎಲ್ಲ ಲೆಕ್ಕಾಚಾರಗಳನ್ನು ಬುಡಮೇಲು ಮಾಡಿ ಮಾನವರನ್ನು ದಿಗ್ಮೂಢರನ್ನಾಗಿಸುತ್ತಿದೆ; ಅಸಹಾಯಕರನ್ನಾಗಿಸುತ್ತಿದೆ. ಒಂದು ಬಿಕ್ಕಟ್ಟು ಹಾಗು ಇನ್ನೊಂದು ಬಿಕ್ಕಟ್ಟಿನ ನಡುವೆ ನಮ್ಮ ಸಾಮಾನ್ಯ ಜೀವನ ನಡೆದಿದೆ. ಈ ತಥಾಕಥಿತ ಜೀವನದಲ್ಲಿ ನಾವು ನಮ್ಮೆಲ್ಲ ಸಮಯ ಹಾಗು ಶಕ್ತಿಯನ್ನು ಎಲ್ಲ ವಿಷಯಗಳಿಗಾಗಿ ವ್ಯಯಿಸುತ್ತೇವೆ. ಆದರೆ ಮಾನವನ ಇರವಿನ ಉದ್ದೇಶ ಹಾಗು ನಮ್ಮ ಜೀವನದ ಬಗ್ಗೆ ಗಂಭೀರ ಮನನ ಹಾಗೂ ಚಿಂತನೆ ಮಾಡುವುದಿಲ್ಲ. ಮುಂದೆ ಉದ್ಭವಿಸುವ ಜಾಗತಿಕ ಬಿಕ್ಕಟ್ಟಿಗೆ ನಮ್ಮ ವರ್ತಮಾನದ ಜೀವನ ಶೈಲಿ ಕಾರಣವಾಗಬಹುದೇ ಎಂದು ನಾವು ನಮ್ಮನ್ನು ಪ್ರಶ್ನಿಸಿಕೊಳ್ಳುವುದಿಲ್ಲ. ಈ ಪ್ರಶ್ನೆ ನಮ್ಮ ಮನದಲ್ಲಿ ಮೂಡುವುದೇ ಇಲ್ಲ. ಪ್ರಶ್ನೆ ಉದ್ಭವಿಸಿದರೂ ನಾವು ಅದನ್ನು ಎದುರಿಸುವ ಧೈರ್ಯ ಮಾಡುವುದಿಲ್ಲ.

ಜೆ.ಕೃಷ್ಣಮೂರ್ತಿ ಈ ಸವಾಲನ್ನೆ ನಮ್ಮ ಮುಂದಿಡುತ್ತಿದ್ದಾರೆ ಮತ್ತು ಹಲವಾರು ಮೂಲಭೂತ ಪ್ರಶ್ನೆಗಳ ಬಗ್ಗೆ ನಮ್ಮಲ್ಲಿ ಅರಿವು ಮೂಡಿಸುತ್ತಿದ್ದಾರೆ. ಅವರು ಎತ್ತಿರುವ ಕೆಲವು ಪ್ರಶ್ನೆಗಳನ್ನು ೧೯೩೪ರಿಂದ ೧೯೮೫ರ ವರೆಗಿನ ಐದು ದಶಕಗಳ ಅವಧಿಯಲ್ಲಿ ಅವರು ಮಾಡಿರುವ ಪ್ರವಚನಗಳು ಹಾಗು ಬರವಣಿಗೆಗಳಿಂದ ಆಯ್ದು ಇಲ್ಲಿ ನೀಡಲಾಗಿದೆ.

©2020, Krishnamurti Foundation India

ನಿಜವಾದ ಬಿಕ್ಕಟ್ಟು

Madras, 22 October 1947; The Collected Works, Vol. IV.

ಸದ್ಯದ ಜಾಗತಿಕ ಬಿಕ್ಕಟ್ಟು ಅಸಾಧಾರಣ ಸ್ವರೂಪದ್ದಾಗಿದೆ. ಇಂಥ ಕೆಲವು ಭೀಕರ ದುರಂತಗಳು ಈ ಹಿಂದೆ ಆಗಿವೆ. ಆದರೆ ಸದ್ಯದ ಬಿಕ್ಕಟ್ಟು ಮನುಷ್ಯನ ಜೀವನದಲ್ಲಿ ಸಾಮಾನ್ಯವಾಗಿ ಕಂಡು ಬರುವಂಥದ್ದಲ್ಲ. ಈ ಗೊಂದಲ ಹಾಗು ಅಸ್ತವ್ಯಸ್ತತೆ ಜಗತ್ತಿನಾದ್ಯಂತ ಕಂಡುಬಂದಿದೆ. ಅದು ಭಾರತೀಯ ಅಥವಾ ಯುರೋಪಿಯನ್ ಅಲ್ಲ; ಬದಲಾಗಿ ಜಗತ್ತಿನ ಮೂಲೆಮೂಲೆಗೂ ವ್ಯಾಪಿಸಿದೆ. ಶಾರೀರಿಕವಾಗಿ, ಮಾನಸಿಕವಾಗಿ, ನೈತಿಕವಾಗಿ, ಆಧ್ಯಾತ್ಮಿಕವಾಗಿ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಗೊಂದಲ ಹಾಗೂ ವಿಘಟನೆ ಕಂಡುಬಂದಿದೆ. ನಾವೊಂದು ಕಂದಕದ ತುದಿಯಲ್ಲಿ ನಿಂತು ನಮ್ಮ ಕ್ಷುದ್ರ ವ್ಯವಹಾರಗಳ ಬಗ್ಗೆ ಕಚ್ಚಾಡುತ್ತಿದ್ದೇವೆ. ಕೆಲವೇ ಕೆಲವರು ಈ ಜಾಗತಿಕ ಬಿಕ್ಕಟ್ಟಿನ ಅಸಾಧಾರಣ ಲಕ್ಷಣವನ್ನು, ಇದೆಷ್ಟು ಗಾಢವಾದದ್ದು ಹಾಗು ಮನಕಲಕುವಂಥದ್ದು ಎಂಬುದನ್ನು ಮನಗಂಡಿದ್ದಾರೆ ಎಂದು ತೋರುತ್ತದೆ. ಈ ಗೊಂದಲವನ್ನು ಅರಿತ ಕೆಲವರು ಕಂದಕದ ಅಂಚಿನಲ್ಲಿ ನಿಂತು ಜೀವನ ವಿನ್ಯಾಸವನ್ನು ಮರು ಸಂಯೋಜಿಸುತ್ತಿದ್ದಾರೆ. ಸ್ವತಃ ಗೊಂದಲದಲ್ಲಿ ಮುಳುಗಿರುವ ಇವರು ಇನ್ನಷ್ಟು ಗೊಂದಲ ಸೃಷ್ಟಿಸುತ್ತಿದ್ದಾರೆ.

*Madras,
22 October 1947;
The Collected
Works, Vol. IV.*

ಈ ಭೀಕರ ದುರಂತ ಆಕಸ್ಮಿಕವಲ್ಲ ; ನಾವೆಲ್ಲರೂ ಇದರ ಕಾರಣಕರ್ತರು. ಅಸೂಯೆ, ಭಾವಾತಿರೇಕ, ಅತಿಯಾಸೆ, ಅಧಿಕಾರದ ಹಂಬಲ, ಪ್ರಾಬಲ್ಯದ ಬಯಕೆ, ಪೈಪೋಟಿ ಹಾಗು ನಿಷ್ಕರುಣೆ,ಇಂದ್ರಿಯ ಲೋಲುಪತೆ ಮತ್ತು ತತ್ ಕ್ಷಣದ ಮೌಲ್ಯಗಳ ನಮ್ಮ ದೈನಂದಿನ ಚಟುವಟಿಕೆಗಳಿಂದಾಗಿ ಈ ದುರಂತ ಸಂಭವಿಸಿದೆ. ಈ ಭೀಕರ ಯಾತನೆ ಹಾಗು ಗೊಂದಲಗಳಿಗೆ ನಾವೇ ಹೊಣೆಗಾರರು. ಇದಕ್ಕೆ ಬೇರೆ ಯಾರೂ ಕಾರಣರಲ್ಲ;ನೀವು ಮತ್ತು ನಾನು ಕಾರಣ. ನೀವು ಅವಿವೇಕಿಗಳು, ಅರಿವಿಲ್ಲದವರು, ನಿಮ್ಮ ಮಹದಾಸೆಗಳು, ಸುಖಾಪೇಕ್ಷೆಗಳು, ಇಂದ್ರಿಯಸುಖಗಳು ಮತ್ತು ಅವುಗಳ ಅರಸುವಿಕೆಯಲ್ಲಿ ಮುಳುಗಿಹೋಗಿದ್ದೀರಿ. ಈ ಗಳಿಗೆಯಲ್ಲಿ ಸುಖಕೊಡುವ ಮೌಲ್ಯಗಳಲ್ಲಿ ಮುಳುಗಿ ಈ ಅಗಾಧವಾದ, ನುಂಗಿನೊಣೆಯುವ ದುರಂತವನ್ನು ಸೃಷ್ಟಿಸಿದ್ದೀರಿ. ಈ ಗೊಂದಲಕ್ಕೆ ನೀವೇ ಕಾರಣ, ಬೇರಾವ ಗುಂಪೂ ಅಲ್ಲ, ಬೇರಾವ ವ್ಯಕ್ತಿಯೂ ಅಲ್ಲ; ನೀವೇ ಕಾರಣ.

*New Delhi,
14 November 1948;
The Collected
Works, Vol. V.*

ಆಧುನಿಕ ಜಗತ್ತು ಅಂದರೆ ಏನು? ಸಾಮೂಹಿಕ ಸಂಘಟನೆಗಳಲ್ಲಿ ತಂತ್ರಗಾರಿಕೆ ಮತ್ತು ದಕ್ಷತೆಯಿಂದ ಆಧುನಿಕ ಜಗತ್ತು ರೂಪುಗೊಂಡಿದೆ. ತಂತ್ರಜ್ಞಾನದಲ್ಲಿ ಅಸಾಧಾರಣ ಪ್ರಗತಿಯಾಗಿದೆ. ಆದರೆ ಜನಸಾಮಾನ್ಯರ ಅಗತ್ಯಗಳ ವಿತರಣೆಯಲ್ಲಿ ಅಸಮತೋಲನವಿದೆ; ಉತ್ಪಾದನೆಯ ಮೂಲಗಳು ಕೆಲವೇ ಕೆಲವರ ಹಿಡಿತದಲ್ಲಿದೆ. ರಾಷ್ಟ್ರೀಯತೆಗಳ ನಡುವೆ ತಾಕಲಾಟ ನಡೆದಿದೆ, ಸಾರ್ವಭೌಮ ಸರಕಾರಗಳ ದೆಸೆಯಿಂದ ಯುದ್ಧಗಳು ಸತತವಾಗಿ ನಡೆದಿವೆ. ಇದು ಆಧುನಿಕ ಪ್ರಪಂಚ ಅಲ್ಲವೆ? ಕ್ರಿಯಾಶೀಲ ಮಾನಸಿಕ ಮುನ್ನಡೆಯಾಗದೆ ತಾಂತ್ರಿಕ ಪ್ರಗತಿ ಆಗಿದೆ; ಹೀಗಾಗಿ ಅಸಮತೋಲನದ ಸ್ಥಿತಿ ಕಂಡುಬಂದಿದೆ. ಅಸಾಮಾನ್ಯವಾದ ವೈಜ್ಞಾನಿಕ ಸಾಧನೆಗಳಾಗಿವೆ, ಇದೇ ವೇಳೆಯಲ್ಲಿ ಮಾನವ ಯಾತನೆ,ಶುಷ್ಕ ಹೃದಯಗಳು ಮತ್ತು ಠೊಳ್ಳು ಮನಸ್ಸುಗಳೂ ಕಂಡು ಬಂದಿವೆ........ ಹೀಗೆ, ಇದು ಈ ಆಧುನಿಕ ಜಗತ್ತು ಅಂದರೆ ನೀವೇ. ಲೋಕ ನಿಮ್ಮಿಂದ ಬೇರೆಯಲ್ಲ. ನೀವೇ ಲೋಕ; ಅಂದರೆ ರೂಢಿಸಲ್ಪಟ್ಟ ಬುದ್ಧಿ ಮತ್ತು ಠೊಳ್ಳು ಮನಸ್ಸು, ಅದು ನೀವೇ.

ನಿಜವಾದ ಬಿಕ್ಕಟ್ಟು

Madras,
25 December 1982;
Mind Without Measure.

ಬಿಕ್ಕಟ್ಟು ಇದೆ. ಅದು ಜಗತ್ತಿನಲ್ಲಿ ಇಲ್ಲ, ಅದು ಅಣ್ವಸ್ತ್ರ ಸಮರವಲ್ಲ, ಅದು ಈಗ ಸಂಭವಿಸುತ್ತಿರುವ ಭಯಂಕರ ವಿಭಜನೆ ಅಥವಾ ಕ್ರೌರ್ಯವಲ್ಲ. ನಮ್ಮ ಪ್ರಜ್ಞೆಯಲ್ಲಿ ಬಿಕ್ಕಟ್ಟು ಇದೆ. ನಾವೇನಾಗಿದ್ದೇವೋ ಅದೇ ನಮ್ಮ ಬಿಕ್ಕಟ್ಟು.


ಮಾನವ ಪ್ರಜ್ಞೆಯಲ್ಲಿ
ಬಿಕ್ಕಟ್ಟು
ಜೀವನದ ಪಾವಿತ್ರ್ಯದಿಂದ
ಮಾನವರು ತಮ್ಮನ್ನು ತಾವು
ಕಳಚಿಕೊಂಡಾಗ.

ನಿಜವಾದ ಬಿಕ್ಕಟ್ಟು

Bombay,
28 January 1968;
Meeting Life.

ಸಹಸ್ರಾರು ವರ್ಷಗಳಿಂದ ಬದುಕುತ್ತಾ ಬಂದಿರುವ ಮನುಷ್ಯ ನಿಗೆ ಯಾಕೆ ಇಂಥ ಯಾತನೆ ಮತ್ತು ಸಂಘರ್ಷದ ಪಾಡು ಎದುರಾಗಿದೆ?....... ಮಿತಿಮೀರಿದ ಜನಸಂಖ್ಯೆ, ತಾಂತ್ರಿಕ ಜ್ಞಾನ ದಿಂದಾಗಿ ಉಂಟಾದ ನೈತಿಕತೆಯ ಅಭಾವ ಮತ್ತು ಪರಸ್ಪರ ನೇರ ಸಂಪರ್ಕದ ಗೈರುಹಾಜರಿ ಮದಲಾದ ಸರಳ ವಿವರಣೆಗಳನ್ನು ಬದಿಗಿಟ್ಟು ನೋಡಿ; ಹಾಗಾದರೆ ಈ ದುಸ್ಥಿತಿಗೆ ಮೂಲಭೂತ ಕಾರಣ ಏನು? ಸದಾಚಾರ, ಕರುಣೆ ಮತ್ತು ಅಹಿಂಸೆಯ ಪರಂಪರೆಯುಳ್ಳ ಇಂಥ ಒಂದು ದೇಶದಲ್ಲಿ...... ಯಾಕೆ ಈ ಯಾತನೆ? ಯಾವಾಗ ಏನು ಪೂರ್ಣ ಕೆಟ್ಟು ಹೋಯಿತು?

*Madras,
26 October 1947;
The Collected
Works, Vol. IV.*

ಪ್ರಾಚೀನ ಕಾಲದಲ್ಲಿ ಒಂದಿಷ್ಟು ಮಂದಿ ಮಹತ್ವಾಕಾಂಕ್ಷೆ, ಪ್ರಾಮಾಣ್ಯ,ದುಷ್ಟ ಬುದ್ಧಿ ಮತ್ತು ದುರಾಸೆಯ ಬಂಧನಗಳಿಂದ ಮುಕ್ತರಾಗಿದ್ದರು; ಹೀಗಾಗಿ ಆಧ್ಯಾತ್ಮಿಕ ಹಾಗೂ ನೈತಿಕ ಅಧಃಪತನದಿಂದ ಸಮಾಜವನ್ನು ಕಾಪಾಡಲು ಮಾರ್ಗದರ್ಶನ ಮಾಡುವುದು ಅವರಿಗೆ ಸಾಧ್ಯವಾಯಿತು. ಗುಂಪು ಅಥವಾ ಸಮೂಹ ದೊಡ್ಡದಾದಷ್ಟೂ ಸಮಾಜದ, ದೇಶದ ಭದ್ರತೆಯ ಸಮಸ್ಯೆ ದೊಡ್ಡದಾಗುತ್ತದೆ. ಈ ಕಾರಣದಿಂದಾಗಿ ಭಾರತದಂಥ ಒಂದೆರಡು ದೇಶಗಳು ಮಾತ್ರವೇ ತಾಳಿ ಬಾಳಿದವು. ಏಕೆಂದರೆ ಜಗತ್ತಿನ ಜಂಜಡದಲ್ಲಿ ಸಿಲುಕಿಕೊಳ್ಳದವರು ಕೆಲವೇ ಕೆಲವರು; ನೀವು ಅಸಾಮಾನ್ಯವಾದ ಬಿಕ್ಕಟ್ಟಿನಲ್ಲಿ ಸಿಲುಕಿಕೊಂಡಿದ್ದೀರಿ.

*Bombay,
28 January 1978.*

ರೋಗದಿಂದಾದ ದುಃಖವಿದೆ, ಪೂರ್ಣ ಪ್ರತ್ಯೇಕತೆಯ ಕೊರಗಿನಿಂದ ಒದಗಿದ ದುಃಖವಿದೆ. ಈ ಎಲ್ಲ ಬಡವರನ್ನು, ಅಜ್ಞಾನಿಗಳನ್ನು, ಕೊಳಕರನ್ನು, ಭರವಸೆ ಕಳೆದುಕೊಂಡವರನ್ನು ಕಂಡಾಗ ಒದಗುವ ಬಡತನದ ದುಃಖವಿದೆ. ಪ್ರಪಂಚದ ಎಲ್ಲ ಪ್ರಾಣಿಗಳನ್ನು ಪ್ರಯೋಗಾಲಯಗಳಲ್ಲಿ ಕೊಲ್ಲುವ, ಕೊಚ್ಚುವ ಹಾಗೂ ನಾಶಮಾಡುವ ಕ್ರಮಗಳನ್ನು ಕಂಡಾಗ ದುಃಖ ಉಂಟಾಗುತ್ತದೆ.

25 February 1983; Krishnamurti to Himself.

ವಿಚಿತ್ರವೆಂದರೆ ನಿಸರ್ಗದ ಜೊತೆ ನಮ್ಮ ಸಂಬಂಧ ತೀರ ಮಿತವಾದುದು. ಈ ಪೃಥ್ವಿಯ ಮೇಲಿನ ಸಕಲ ಜೀವಿಗಳ ಬಗ್ಗೆ ನಮ್ಮಲ್ಲಿ ಅಂತಃಕರಣ ಇಲ್ಲವೇನೋ ಎಂದು ಅನ್ನಿಸುತ್ತದೆ. ನಿಸರ್ಗದ ಜೊತೆ ನಾವು ಗಾಢವಾದ, ಶಾಶ್ವತವಾದ ಸಂಬಂಧವನ್ನು ಬೆಳೆಸಿಕೊಂಡರೆ ನಮ್ಮ ಹೊಟ್ಟೆಯ ಹಸಿವು ತಣಿಸಲು ನಾವೆಂದೂ ಯಾವ ಪ್ರಾಣಿಯನ್ನೂ ಕೊಲ್ಲುವುದಿಲ್ಲ; ನಾವು ನಮ್ಮ ಪ್ರಯೋಜನಕ್ಕಾಗಿ ಯಾವುದೇ ಪ್ರಾಣಿಯನ್ನೂ ಗಾಸಿಗೊಳಿಸುವುದಿಲ್ಲ. ಮಂಗ, ನಾಯಿ, ಗಿನಿ ಹಂದಿ ಯನ್ನು ಬಗೆದು ನೋಡುವುದಿಲ್ಲ. ನಾವು ನಮ್ಮ ಗಾಯಗಳನ್ನು ವಾಸಿಮಾಡಲು, ದೇಹಗಳನ್ನು ಶುಶ್ರೂಷೆ ಮಾಡಲು ಬೇರೆ ಉಪಾಯಗಳನ್ನು ಹುಡುಕುತ್ತಿದ್ದೆವು. ಆದರೆ ಮನಸ್ಸನ್ನು ಉಪಶಮನಮಾಡುವುದು ತೀರ ಬೇರೆ ಸಂಗತಿ. ನೀವು ನಿಸರ್ಗದ ಸಂಗದಲ್ಲಿದ್ದರೆ ಆ ಉಪಶಮನ ಕ್ರಮೇಣ ಸಾಧ್ಯವಾಗುತ್ತದೆ.

ನಿಜವಾದ
ಬಿಕ್ಕಟ್ಟು

The Whole Movement of Life is Learning: Letters to the Schools, Ch. 67.

ನಾವು ನಿಸರ್ಗದ ಜೊತೆ ಸಂಬಂಧ ಕಡಿದುಕೊಂಡರೆ ಪರಸ್ಪರ ಸಂಪರ್ಕ ಕಳೆದುಕೊಳ್ಳುತ್ತೇವೆ. ಹಕ್ಕಿಗಳ ಜೊತೆ, ಸಂಕೋಚದ ಹಾಗು ಪುಕ್ಕಲು ಸ್ವಭಾವದ ಕಾಡು ಕೋಳಿಗಳ ಜೊತೆ ನೀವು ಸಂಪರ್ಕ ಕಡಿದುಕೊಂಡರೆ ನೀವು ನಿಮ್ಮ ಮಗುವಿನ ಜೊತೆ ದಾರಿಹೋಕನ ಜೊತೆ ಕೂಡಾ ಸಂಪರ್ಕ ಕಳೆದುಕೊಳ್ಳುತ್ತೀರಿ. ಆಹಾರಕ್ಕಾಗಿ ನೀವು ಒಂದು ಪ್ರಾಣಿಯನ್ನು ಕೊಲ್ಲುವ ಮೂಲಕ ಅಸೂಕ್ಷ್ಮತೆ ಬೆಳೆಸಿಕೊಳ್ಳುತ್ತೀರಿ; ಇದು ಗಡಿಯಾಚೆಗಿರುವ ಮನುಷ್ಯನನ್ನು ಕೊಲ್ಲುತ್ತದೆ. ಅಗಾಧವಾದ ಚಲನಶೀಲವಾದ ಬದುಕಿನ ಸಂಪರ್ಕವನ್ನು ಕಡಿದುಕೊಂಡಾಗ ನೀವು ಎಲ್ಲ ಸಂಬಂಧಗಳಿಂದ ವಂಚಿತರಾಗುತ್ತೀರಿ. ಆಗ ನೀವು ಅಂದರೆ ತನ್ನೆಲ್ಲಾ ಹುಚ್ಚು ತುಡಿತಗಳ, ಬೇಡಿಕೆಗಳ ಹಾಗು ಅರಸುವಿಕೆಗಳ ಅಹಂ ಎಲ್ಲಕ್ಕಿಂತ ಮುಖ್ಯವಾಗಿಬಿಡುತ್ತದೆ. ಅನಂತ ಸಂಘರ್ಷಗಳ ಮೂಲಕ ನಿಮ್ಮ ಮತ್ತು ಜಗತ್ತಿನ ನಡುವಿನ ಕಂದಕ ಇನ್ನಷ್ಟು ಅಗಲವಾಗುತ್ತದೆ.

ನಿಜವಾದ ಬಿಕ್ಕಟ್ಟು

The Whole Movement of Life is Learning: Letters to the Schools, Ch.70.

ನೀವು ಮನುಷ್ಯ ಪ್ರಪಂಚದ ಕಡೆ ಕಣ್ಣು ಹಾಯಿಸದೆ ನಿಸರ್ಗ, ಆಕಾಶದ ಕಡೆ ದೃಷ್ಟಿ ಹಾಯಿಸಿದರೆ ಅಸಾಮಾನ್ಯವಾದ ವ್ಯವಸ್ಥೆ, ಸಮತೋಲನ ಹಾಗೂ ಸಾಮರಸ್ಯವನ್ನು ಕಾಣುವಿರಿ.ಪ್ರತಿಯೊಂದು ಮರ ಹಾಗೂ ಹೂವಿಗೆ ಅದರದ್ದೇ ಆದ ಅಚ್ಚುಕಟ್ಟುತನ, ಚೆಲುವು ಇದೆ; ಪ್ರತಿಯೊಂದು ಕೋಡುಗಲ್ಲು ಮತ್ತು ಕಣಿವೆಗೆ ಅದರದ್ದೇ ಆದ ಲಯ ಹಾಗೂ ಸ್ಥಿರತೆ ಇದೆ. ಮನುಷ್ಯ ನದಿಗಳನ್ನು ನಿಯಂತ್ರಿಸುತ್ತಾ ಕಲುಷಿತಗೊಳಿಸಿದರೂ ಅವುಗಳಿಗೆ ತಮ್ಮದೇ ಆದ ಹರಿವು, ದೂರಗಾಮಿ ಚಲನೆ ಇದ್ದೇಇದೆ. ಮನುಷ್ಯನನ್ನು ಹೊರತುಪಡಿಸಿ, ಸಾಗರಗಳಲ್ಲಿ, ಗಾಳಿಯಲ್ಲಿ ಮತ್ತು ಅನಂತ ಆಕಾಶದಲ್ಲಿ ಅಸಾಧಾರಣವಾದ ಪರಿಶುದ್ಧತೆ ಮತ್ತು ವ್ಯವಸ್ಥಿತವಾದ ಇರವು ಇದೆ. ನರಿ ಕೋಳಿಯನ್ನು ಕೊಂದರೂ ದೊಡ್ಡ ಪ್ರಾಣಿಗಳು ಸಣ್ಣ ಪ್ರಾಣಿಗಳನ್ನು ಆಹಾರವಾಗಿ ಕಬಳಿಸಿದರೂ ಈ ವಿಶ್ವದಲ್ಲಿ ಮನುಷ್ಯನನ್ನು ಹೊರತುಪಡಿಸಿ ಕ್ರೌರ್ಯವೆಂಬುದೊಂದು ವ್ಯವಸ್ಥೆ. ಮನುಷ್ಯ ಎಲ್ಲಿಯ ತನಕ ಮಧ್ಯಪ್ರವೇಶ ಮಾಡುವುದಿಲ್ಲವೋ ಅಲ್ಲಿಯ ತನಕ ಸಮತೋಲನ ಮತ್ತು ಸಾಮರಸ್ಯದ ಅಪಾರ ಚೆಲುವು ಇದ್ದೇ ಇರುತ್ತದೆ.

ನಿಜವಾದ ಬಿಕ್ಕಟ್ಟು

IIT-Bombay, 7 February 1984; Why are You being Educated?

ಹಾಗಾದರೆ ಈ ಇರವಿನ ಅರ್ಥವೇನು? ನೀವು ಅದನ್ನು ಗಮನಿಸಲು ಮನಸ್ಸು ಮಾಡದಿರಬಹುದು. ನೀವು ಅದನ್ನು ದೂರವಿಡಲು ಬಯಸಬಹುದು...... ನೀವು ಭೌತಶಾಸ್ತ್ರ, ಭಾಷಾ ವಿಜ್ಞಾನ,ಜೀವಶಾಸ್ತ್ರ, ಸಮಾಜಶಾಸ್ತ್ರ, ತತ್ವಶಾಸ್ತ್ರ, ಮನೋವಿಶ್ಲೇಷಣೆ, ಮನೋವೈದ್ಯಕೀಯ ಇತ್ಯಾದಿ ವಿಷಯಗಳಲ್ಲಿ ಜ್ಞಾನ ಸಂಪಾದನೆಗಾಗಿ ಇಪ್ಪತ್ತೋ ಮೂವತ್ತೋ ವರ್ಷಗಳನ್ನು ವ್ಯಯಿಸಬಹುದು.ನೀವು ಹಲವಾರು ವರ್ಷಗಳನ್ನು ಇವುಗಳ ಅಧ್ಯಯನಕ್ಕಾಗಿ ಬಳಸುವಿರಿ. ಆದರೆ ನೀವು ಯಾರು ಮತ್ತು ನೀವು ಹೀಗೇಕೆ ಬದುಕುತ್ತಿದ್ದೀರಿ ಎಂಬ ಬಗ್ಗೆ ಒಂದು ದಿನ ಬಿಡಿ ಒಂದು ಗಂಟೆಯನ್ನೂ ವ್ಯಯಿಸಲು ಸಿದ್ಧರಿಲ್ಲ.

ನಿಜವಾದ ಬಿಕ್ಕಟ್ಟು

Bombay,
10 February 1985;
That Benediction is Where You are.

ನಾವು ನಮ್ಮ ಬದುಕನ್ನು ವ್ಯರ್ಥಗೊಳಿಸುತ್ತಿದ್ದೇವಾ? ವ್ಯರ್ಥಗೊಳಿಸುವುದೆಂದರೆ ನಮ್ಮ ಶಕ್ತಿಯನ್ನು ವಿವಿಧ ಬಗೆಗಳಲ್ಲಿ ಅಂದರೆ ಪರಿಣತ ವೃತ್ತಿಗಳಲ್ಲಿ ವ್ಯಯಿಸುತ್ತಿದ್ದೇವೆ. ನಾವು ನಮ್ಮ ಒಟ್ಟು ಇರವನ್ನು, ನಮ್ಮ ಜೀವನವನ್ನು ಹಾಳುಗೆಡಹುತ್ತಿದ್ದೇವಾ?.ನೀವು ಶ್ರೀ ಮಂತರಾಗಿದ್ದರೆ " ಹೌದು, ನಾನು ಸಾಕಷ್ಟು ಹಣವನ್ನು ಕೂಡಿಟ್ಟಿದ್ದೇನೆ, ಅದು ನನಗೆ ತುಂಬಾ ಖುಷಿ ಕೊಡುತ್ತಿದೆ "ಅನ್ನಬಹುದು. ನಿಮ್ಮಲ್ಲಿ ಏನೋ ಒಂದು ಪ್ರತಿಭೆ ಇದೆ ಅನ್ನೋಣ, ಅದು ಧಾರ್ಮಿಕ ಜೀವನಕ್ಕೆ ಅಪಾಯಕಾರಿ. ಪ್ರತಿಭೆ ಎಂಬುದು ವರದಾನ, ಒಂದು ಬೌದ್ಧಿಕ ಸಾಮರ್ಥ್ಯ, ಒಂದು ನಿರ್ದಿಷ್ಟ ಬಗೆಯ ಕ್ಷಮತೆ-ಇದೇ ವಿಶೇಷೀಕರಣ. ಈ ವಿಶೇಷಿಕರಣ ಎಂಬುದು ಒಡೆಯುವ ಪ್ರಕ್ರಿಯೆ. ಹೀಗಾಗಿ ಈ ಬದುಕನ್ನು ಹಾಳುಮಾಡುತ್ತಿದ್ದೇನಾ ಎಂದು ನಿಮ್ಮನ್ನೇ ನೀವು ಕೇಳಬೇಕು.ನೀವು ಶ್ರೀಮಂತರಿರಬಹುದು, ನಿಮ್ಮಲ್ಲಿ ಸಕಲ ಸಾಮರ್ಥ್ಯಗಳಿರಬಹುದು, ನೀವು ವಿಶೇಷಜ್ಞರಿರಬಹುದು, ದೊಡ್ಡ ವಿಜ್ಞಾನಿಯಾಗಿರಬಹುದು ಅಥವಾ ವಾಣಿಜ್ಯೋದ್ಯಮಿಯಾಗಿರಬಹುದು, ಆದರೆ ನಿಮ್ಮ ಬದುಕಿನ ಕೊನೆಗಾಲದಲ್ಲಿ ಇದೆಲ್ಲವೂ ವ್ಯರ್ಥವಾ?

ನಿಜವಾದ
ಬಿಕ್ಕಟ್ಟು

Saanen, 22July, 1973

ನಿಮ್ಮ ಸಂಸ್ಕೃತಿ ಹೀಗೆ ಹೇಳುತ್ತದೆ " ಬದುಕಿನ ಅರ್ಥ ಕಟ್ಟಿಕೊಂಡು ಏನಾಗಬೇಕು? ಸುಮ್ಮನೆ ಇದ್ದು ಬಿಡಿ.ಕೊಳಕುತನ,ಪಶುಸದೃಶ ಜೀವನ,ದುಃಖ, ನೋವು,ಆತಂಕ, ಸುಖ, ಭಯ , ಮಹಾ ಬೇಸರ,ಒಂಟಿತನ ಎಲ್ಲವನ್ನೂ ಸಹಿಸಿಕೊಳ್ಳಿ. ಅದು ನಿಮ್ಮ ಬದುಕಿನ ಭಾಗ, ನೀವು ಅದನ್ನು ಮೀರುವುದು ಸಾಧ್ಯವಿಲ್ಲ; ಆದುದರಿಂದ ಸುಖ ಅನುಭವಿಸಿ,ಸುಖವೇ ನಿಮ್ಮ ಬದುಕಿನ ಮುಖ್ಯ ಸಂಗತಿಯಾಗಲಿ".

ನಿಜವಾದ ಬಿಕ್ಕಟ್ಟು

The Whole Movement of Life is Learning: Letters to Schools, Ch 28.

ಜಗತ್ತಿನಾದ್ಯಂತ ಮನುಷ್ಯರು ಹೆಚ್ಚು ಕಡಿಮೆ ಅವನತಿ ಹೊಂದುತ್ತಿದ್ದಾರೆ. ಕಾಮ ಸುಖ,ಸ್ವಚ್ಛಂದತೆ, ಉದ್ರೇಕ ಸುಖ, ಸ್ವಾರ್ಥ ಸುಖ, ಅಧಿಕಾರ ಅಂತಸ್ತಿನ ಸುಖ, ತನ್ನ ಆಸೆಗಳನ್ನು ಮಾತ್ರ ಪೂರೈಸಿಕೊಳ್ಳುವ ಸತತ ಬೇಡಿಕೆ ಇತ್ಯಾದಿಯಾಗಿ ವೈಯಕ್ತಿಕ ಅಥವಾ ಸಾಮೂಹಿಕ ಸುಖವೇ ಜೀವನದ ಪ್ರಬಲ ಹಂಬಲವಾದಾಗ ಅವನತಿ ಕಂಡುಬರುತ್ತದೆ. ಮನುಷ್ಯ ಸಂಬಂಧಗಳು ಕೇವಲವೂ ಸುಖಾಪೇಕ್ಷಿಯೂ ಆದಾಗ ಅವನತಿ ಉಂಟಾಗುತ್ತದೆ. ಜವಾಬ್ದಾರಿ ಎಂಬುದು ಪೂರ್ತಿ ಅರ್ಥಹೀನವಾದಾಗ, ಇನ್ನೊಬ್ಬನ ಬಗ್ಗೆ, ಈ ನೆಲ ಹಾಗು ಕಡಲಿನ ವಸ್ತುಗಳ ಬಗ್ಗೆ ಕಾಳಜಿ ಇಲ್ಲದಿರುವಾಗ ನೆಲ ಬಾನುಗಳ ಬಗೆಗಿನ ಈ ಅಗೌರವ ಇನ್ನೊಂದು ಬಗೆಯ ಅವನತಿಗೆ ಕಾರಣವಾಗುತ್ತದೆ. ಉನ್ನತ ಸ್ಥಾನಗಳಲ್ಲಿ ನಯವಂಚನೆ, ವ್ಯಾಪಾರದಲ್ಲಿ ಅಪ್ರಾಮಾಣಿಕತೆ,ನಿತ್ಯದ ಮಾತುಕತೆಗಳಲ್ಲಿ ಸುಳ್ಳು, ಕೆಲವೇ ಕೆಲವರ ದೌರ್ಜನ್ಯ, ಪದಾರ್ಥಗಳ ಮೇಲುಗೈ ಇವೆಲ್ಲ ಕಂಡುಬಂದಾಗ ಒಟ್ಟು ಜೀವನಕ್ಕೆ ದ್ರೋಹ ಬಗೆದ ಸ್ಥಿತಿ ಕಂಡು ಬರುತ್ತದೆ. ಆಗ ಕೊಲೆಗಡುಕತನವೇ ಜೀವನದ ಏಕೈಕ ಭಾಷೆಯಾಗುತ್ತದೆ. ಪ್ರೇಮವನ್ನು ಸುಖವೆಂದು ಭಾವಿಸಿದಾಗ ಮಾನವರು ಸ್ವತಃ ತಮ್ಮ ಬದುಕಿನ ಚೆಲುವು ಹಾಗೂ ಪಾವಿತ್ರ್ಯದ ಸಂಬಂಧವನ್ನು ಕಡಿದು ಕೊಳ್ಳುತ್ತಾರೆ.

ಸುಖಾಪೇಕ್ಷೆ ಹೆಚ್ಚಾದಷ್ಟೂ 'ನಾನು' ಹೆಚ್ಚು ಪ್ರಬಲವಾಗುತ್ತದೆ. ಸುಖದ ಅರಸುವಿಕೆಯಲ್ಲಿ ಮನುಷ್ಯರು ಒಬ್ಬರನ್ನೊಬ್ಬರು ಶೋಷಣೆ ಮಾಡುತ್ತಿದ್ದಾರೆ. ನಮ್ಮ ಬದುಕಿನಲ್ಲಿ ಸುಖವೇ ಪ್ರಧಾನವಾದಾಗ, ಈ ಉದ್ದೇಶಕ್ಕಾಗಿ ಸಂಬಂಧಗಳನ್ನು ಶೋಷಿಸಲಾಗುತ್ತದೆ.ಹೀಗಾಗಿ ಅನ್ಯರ ಜೊತೆ ನಮಗೆ ನಿಜದ ಸಂಬಂಧಗಳಿಲ್ಲ. ಆಗ ಸಂಬಂಧವೆಂಬುದು ವ್ಯಾಪಾರವಾಗುತ್ತದೆ. ತೃಪ್ತಿಯ ತುಡಿತ ಸುಖಾವಲಂಬಿ. ನಮಗೆ ಆ ಸುಖ ಸಿಗದಿದ್ದಾಗ ಅಥವಾ ಅದು ಪ್ರಕಟವಾಗದಿದ್ದಾಗ ಕೋಪ, ಸಿನಿಕತನ, ದ್ವೇಷ, ಮನಃಕಷಾಯ ಉಂಟಾಗುತ್ತದೆ. ಸುಖದ ಈ ಸಂತತ ಹುಡುಕಾಟವೇ ಯಥಾರ್ಥವಾಗಿ ಹುಚ್ಚುತನ.

*Bombay,
15 February 1948;
The Collected
Works, Vol. IV.*

ಮನುಷ್ಯ ಏಕೆ ಇಂದ್ರಿಯ ಸುಖಗಳಲ್ಲಿ ಸಿಲುಕಿ ಕೊಂಡಿದ್ದಾನೆ?...... ಇದೊಂದು ಜ್ವಲಂತ ಸಮಸ್ಯೆ,ಏಕೆಂದರೆ ಆಧುನಿಕ ಸಮಾಜದಲ್ಲಿ ಈ ಸುಖಭೋಗಗಳಿಗೆ ಎಲ್ಲ ಬಗೆಯ ಪ್ರಚೋದನೆ ದೊರೆಯುತ್ತಿದೆ. ವಾರ್ತಾ ಪತ್ರಿಕೆಗಳು, ಸಿನಿಮಾ ಹಾಗೂ ಪುರವಣಿಗಳು ಕಾಮುಕತೆಯನ್ನು ಪ್ರಚೋದಿಸುತ್ತಿವೆ.ನಿಮ್ಮ ಗಮನ ಸೆಳೆಯಲು ಜಾಹಿರಾತುಗಳು ಹೆಂಗಸರ ಚಿತ್ರಗಳನ್ನು ಬಳಸಿಕೊಳ್ಳುತ್ತವೆ. ಬಾಹ್ಯ ಹಾಗೂ ಆಂತರಿಕ ಪ್ರಚೋದನೆಗೆ ಪ್ರೋತ್ಸಾಹ ದೊರೆಯುತ್ತಿದೆ.,ಉದ್ದೇಶಪೂರ್ವಕವಾಗಿ ಅದನ್ನು ರೂಢಿಸಲಾಗುತ್ತಿದೆ.ಸದ್ಯದ ಸಮಾಜ ಪ್ರಧಾನವಾಗಿ ಕಾಮುಕ ಮೌಲ್ಯಗಳ ಪ್ರತಿಫಲ. ಪದಾರ್ಥಗಳು, ಅಧಿಕಾರ, ಸ್ಥಾನಮಾನ, ಕೀರ್ತಿ ಮತ್ತು ವರ್ಗ ಇತ್ಯಾದಿಗಳಿಗೆ ಎಲ್ಲಿಲ್ಲದ ಮಹತ್ವ ಒದಗಿದೆ.ಇಂದ್ರಿಯಾತ್ಮಕ ಮೌಲ್ಯಗಳು ನಿಮ್ಮ ಜೀವನದಲ್ಲಿ ಬಹಳ ಮುಖ್ಯವಾಗಿವೆ.....ನಿಮ್ಮ ಬದುಕುಗಳು ಠೊಳ್ಳಾಗಿವೆ, ಖಾಲಿಯಾಗಿವೆ, ಹಣ ಸಂಪಾದನೆ ಮಾಡುವ, ಇಸ್ಪೀಟು ಆಡುವ, ಸಿನೆಮಾಕ್ಕೆ ಹೋಗುವ ಮತ್ತು ಪುಸ್ತಕಗಳನ್ನು ಓದುವ ಯಾಂತ್ರಿಕ ರೂಢಿಗಳಾಗವೆ.

Varanasi,
22 January 1954;
Leaving School,
Entering Life.

ಶ್ರೀಮಂತರು ರಾತ್ರಿ ಕ್ಲಬ್‌ಗಳಲ್ಲಿ, ವಿನೋದಗಳಲ್ಲಿ, ಕಾರುಗಳಲ್ಲಿ ಹಾಗೂ ಪ್ರಯಾಣಗಳಲ್ಲಿ ತಮ್ಮನ್ನು ತಾವು ಮರೆಯಲು ಬಯಸುತ್ತಾರೆ. ಜಾಣರೂ ತಮ್ಮನ್ನು ತಾವು ಮರೆಯಲು ಬಯಸುತ್ತಾರೆ; ಅದಕ್ಕಾಗಿ ಅವರು ಆವಿಷ್ಕರಿಸಲು,ಅಸಾಧಾರಣ ನಂಬಿಕೆಗಳನ್ನು ರೂಪಿಸಿಕೊಳ್ಳಲು ಬಯಸುತ್ತಾರೆ. ಮೂರ್ಖರು ಕೂಡ ತಮ್ಮನ್ನು ಮರೆಯಲು ಯತ್ನಿಸುತ್ತಾರೆ; ಆದುದರಿಂದಲೆ ಅವರು ಜನರನ್ನು ಅನುಕರಿಸುತ್ತಾರೆ,ಏನು ಮಾಡಬೇಕು ಎಂದು ಹೇಳುವ ಗುರುಗಳನ್ನು ಕಂಡುಕೊಳ್ಳುತ್ತಾರೆ. ಮಹತ್ವಾಕಾಂಕ್ಷಿಗಳು ಕೂಡಾ ಏನಾದರೊಂದನ್ನು ಮಾಡುವ ಮೂಲಕ ತಮ್ಮನ್ನು ಮರೆಯಲೆತ್ನಿಸುತ್ತಾರೆ. ಹೀಗೆ ನಾವೆಲ್ಲರೂ ಬೆಳೆದಂತೆ,ಪ್ರಾಯವಾದಂತೆ ನಮ್ಮನ್ನು ನಾವು ಮರೆಯಲು ಹಂಬಲಿಸುತ್ತೇವೆ.

ನಿಜವಾದ ಬಿಕ್ಕಟ್ಟು

Commentaries on Living, Ch:3

ಚಡಪಡಿಕೆಯ ಮನಸ್ಸಿಗೆ ಬದಲಾಗುವ ವಿವಿಧ ಬಗೆಯ ಅಭಿವ್ಯಕ್ತಿಗಳು ಮತ್ತು ಕ್ರಿಯೆಗಳು ಬೇಕು. ಅದು ಸದಾ ತುಂಬಿರಬೇಕು ಅಥವಾ ಮಗ್ನವಾಗಿರಬೇಕು. ಅದಕ್ಕೆ ಹೆಚ್ಚುತ್ತಲೇ ಇರುವ ಇಂದ್ರಿಯ ಸುಖಗಳು ಹಾಗೂ ಹವ್ಯಾಸಗಳು ಬೇಕು; ಗಾಳಿ ಸುದ್ದಿ ಇದೆಲ್ಲವನ್ನೂ ಒಳಗೊಂಡಿರುತ್ತದೆ. ಹಲವರು ಇನ್ನೊಬ್ಬರ ವ್ಯವಹಾರಗಳಲ್ಲೇ ಮುಳುಗಿರುತ್ತಾರೆ.ಗಾಸಿಪ್ ಅಂಕಣಗಳು, ಕೊಲೆ,ವಿಚ್ಛೇದನಗಳು ಇತ್ಯಾದಿ ವಿವರಗಳಿಂದ ತುಂಬಿದ ಅಸಂಖ್ಯಾತ ಪುರವಣಿಗಳನ್ನು, ಪತ್ರಿಕೆಗಳನ್ನು ಓದುವುದೆಂದರೆ ಇಂಥವರಿಗೆ ಎಲ್ಲಿಲ್ಲದ ಆಸಕ್ತಿ. ಹೀಗೆ ನಾವು ಹೆಚ್ಚು ಹೆಚ್ಚು ಬಹಿರ್ಮುಖರಾಗುತ್ತಾ ಆಂತರ್ಯದಲ್ಲಿ ಠೊಳ್ಳಾಗುತ್ತೇವೆ. ನಾವು ಹೆಚ್ಚು ಹೆಚ್ಚು ಬಹಿರ್ಮುಖರಾದಷ್ಟೂ ನಮಗೆ ಹೆಚ್ಚು ಹೆಚ್ಚು ಸುಖಭೋಗಗಳು, ಆಕರ್ಷಣೆಗಳು ಬೇಕಾಗುತ್ತವೆ. ಆಧುನಿಕ ಇರವು ಈ ಬಗೆಯ ತೋರಿಕೆಯ ಚಟುವಟಿಕೆ ಹಾಗೂ ಆಕರ್ಷಣೆಯನ್ನು ಉತ್ತೇಜಿಸುತ್ತದೆ.

Krishnamurti to Himself, 18 March, 1983

ನಾವು ಭವಿಷ್ಯದ ಬಗ್ಗೆ ಹೆಚ್ಚು ಗಮನ ಕೊಡುತ್ತಿರುವಂತೆ ಭಾಸವಾಗುತ್ತಿಲ್ಲ. ನೀವು ಬೆಳಗ್ಗಿನಿಂದ ತಡ ರಾತ್ರಿಯ ವರೆಗೂ ದೂರದರ್ಶನದಲ್ಲಿ ಕೊನೆಯಿರದ ಮನೋರಂಜನಾ ಕಾರ್ಯಕ್ರಮಗಳನ್ನು ನೋಡುತ್ತೀರಿ. ಮಕ್ಕಳಿಗೂ ಮನೋರಂಜನೆ ದೊರೆಯುತ್ತದೆ. ನಿಮಗೆ ಮನೋರಂಜನೆ ದೊರೆಯುತ್ತಿದೆ ಎಂಬ ಭಾವವನ್ನು ಜಾಹಿರಾತುಗಳು ಮೂಡಿಸುತ್ತವೆ. ಜಗತ್ತಿನಲ್ಲಿ ಎಲ್ಲೆಡೆ ಇದು ನಡೆದಿದೆ. ಈ ಮಕ್ಕಳ ಭವಿಷ್ಯವೇನು? ಕೆಲವೇ ಕೆಲವರು ಅಂಕಣದಲ್ಲಿ ಆಟವಾಡುತ್ತಿರುವುದನ್ನು ಮೂವತ್ತು, ನಲ್ವತ್ತು ಸಾವಿರ ಮಂದಿ ಕಂಡು ಬೊಬ್ಬೆ ಹೊಡೆಯುವ ಕ್ರೀಡೆ ಎಂಬ ಮನೋರಂಜನೆ ಇದೆ...... ಇದನ್ನೆಲ್ಲ ಜಗತ್ತಿನ ವಿವಿಧ ಭಾಗಗಳಲ್ಲಿ ಜನ ನೋಡುತ್ತಾರೆ. ಮನಸ್ಸು ಹೀಗೆ ವಿನೋದಗಳಲ್ಲಿ, ಮನೋರಂಜನೆಯಲ್ಲಿ, ಕ್ರೀಡೆಗಳಲ್ಲಿ ಮಗ್ನವಾಗಿರುವುದನ್ನು ಕಂಡು ಕಾಳಜಿ ಉಳ್ಳವರು ಯಾರಾದರೂ ಭವಿಷ್ಯ ಅಂದರೆ ಏನು? ಎಂದು ಕೇಳಬಹುದು. ಇದೇ ಇದೇ ವಿವಿಧ ರೂಪಗಳಲ್ಲಿ ಕಂಡುಬರುವುದೇ? ಬಗೆಬಗೆಯ ಆಮೋದ ಪ್ರಮೋದಗಳೇ?

ಮನೋರಂಜನಾ ಉದ್ದಿಮೆ ಕ್ರಮೇಣ ಹಿಡಿತ ಸಾಧಿಸುತ್ತ ಹೋದಂತೆ, ಯುವ ಜನಾಂಗ, ವಿದ್ಯಾರ್ಥಿಗಳು, ಮಕ್ಕಳು ನಿರಂತರವಾಗಿ ಸುಖ ಪಡಲು ಪ್ರಚೋದಿತರಾದಾಗ, ರಮ್ಯ ಇಂದ್ರಿಯ ಭಾಗಗಳನ್ನು ಕಲ್ಪಿಸಿಕೊಳ್ಳಲು ಉತ್ತೇಜಿತರಾದಾಗ, ನಿಗ್ರಹ ಮತ್ತು ಸಂಯಮದ ಮಾತು ಮೂಲೆಪಾಲಾಗುತ್ತದೆ. ಆ ಬಗ್ಗೆ ಯೋಚನೆ ಕೂಡ ಮಾಡುವುದಿಲ್ಲ...... ಸಂಯಮದ ಪರಿಣಾಮಗಳ ಬಗ್ಗೆ ಇನ್ನೊಬ್ಬರ ಮಾತು ಕೇಳಲು ಕೂಡ ತಯಾರಿರುವುದಿಲ್ಲ. ನಿಮ್ಮನ್ನು ಬಾಲ್ಯದಿಂದಲೂ ಖುಷಿ ಪಡುವ ರೀತಿಯಲ್ಲಿ ಬೆಳೆಸಿರುವಾಗ, ಮನೋರಂಜನೆಯ ಮೂಲಕ ಪಲಾಯನ ಮಾಡಲು ಬೆಳೆಸಿರುವಾಗ, ನಿಮ್ಮ ಮನಸ್ಸಿನ ಭಾವನೆಗಳನ್ನು ತಡೆಹಿಡಿಯದೆ ಮುಕ್ತವಾಗಿ ಪ್ರಕಟಿಸದಿದ್ದರೆ ಮನೋವಿಕಾರಗಳಿಗೆ ಒಳಗಾಗಬೇಕಾಗುತ್ತದೆ ಎಂದು ಬಹಳಷ್ಟು ಮನೋವಿಜ್ಞಾನಿಗಳು ಹೇಳುತ್ತಿರುವಾಗ ಸಹಜವಾಗಿಯೇ ಹೆಚ್ಚುಹೆಚ್ಚಾಗಿ ಕ್ರೀಡೆ, ವಿನೋದ, ಮನೋರಂಜನೆ ಮುಂತಾದ ಕ್ಷೇತ್ರಗಳಿಗೆ ಧುಮುಕಿ ನೀವು ಈಗ ಏನಾಗಿದ್ದೀರೋ ಅದರಿಂದ ಪಲಾಯನ ಮಾಡುತ್ತೀರಿ.

ನಿಜವಾದ ಬಿಕ್ಕಟ್ಟು

Saanen, 21 July 1981; The Network of Thought.

ರೋಬೊಗಳ ಬೆಳವಣಿಗೆಯಿಂದಾಗಿ ಮನುಷ್ಯನಿಗೆ ದಿನದಲ್ಲಿ ಕೇವಲ ಎರಡು ಗಂಟೆ ಮಾತ್ರ ಕೆಲಸ ಮಾಡಲು ಅವಕಾಶ ದೊರೆಯುತ್ತದೆ. ಇದು ಸದ್ಯೋಭವಿಷ್ಯದಲ್ಲಿ ಸಂಭವಿಸಲಿದೆ. ಆಗ ಮನುಷ್ಯ ಏನು ಮಾಡುತ್ತಾನೆ? ಅವನು ಮನೋರಂಜನಾ ಪ್ರಪಂಚದಲ್ಲಿ ಮುಳುಗಿ ಹೋಗುವನೇ?....... ಅಥವಾ ಅವನು ಅಂತರ್ಮುಖಿಯಾಗುವನೇ? ಇದು ಮನೋರಂಜನೆ ಅಲ್ಲ. ಇದಕ್ಕೆ ಅಸಾಮಾನ್ಯವಾದ ಅವಲೋಕನ, ಪರಿಶೀಲನೆ ಮತ್ತು ಅವೈಯಕ್ತಿಕವಾದ ಪರಿಭಾವನೆ ಬೇಕಾಗುತ್ತದೆ. ಇವು ಈಗ ಇರುವ ಎರಡು ಸಾಧ್ಯತೆಗಳು.

ನಿಜವಾದ ಬಿಕ್ಕಟ್ಟು

The World Within, Ch:75.

ನೀವು ನಿಮ್ಮ ಸಾಮರ್ಥ್ಯಗಳು ಹಾಗು ಜನ್ಮಜಾತ ಕೊಡುಗೆಗಳಿಂದ ಆವೃತರಾಗಿದ್ದೀರಿ. ಅವು ನಿಮ್ಮ ಅಪಾಯಕಾರಿ ಗೆಳೆಯರು. ಅವು ತಮ್ಮಷ್ಟಕ್ಕೆ ತಾವೇ ಗುರಿಗಳಾಗಿ ಮಾರ್ಪಟ್ಟು ನೋವು ಹಾಗೂ ದುಃಖಕ್ಕೆ ಕಾರಣವಾಗುತ್ತವೆ. ನಿಮ್ಮ ಆಹಾರ, ನಿಮ್ಮ ಬಟ್ಟೆಬರೆ, ನಿಮ್ಮ ಭಂಗಿಗಳು ಮತ್ತು ನಿಮ್ಮ ಸುಖಗಳು ನಿಮ್ಮನ್ನು ದಣಿಸಿ ಬಸವಳಿಯುವಂತೆ ಮಾಡುತ್ತವೆ; ನಿಮ್ಮ ಮನಸ್ಸು ಅಸೂಕ್ಷ್ಮವಾಗುತ್ತದೆ, ಗ್ರಹಿಕೆಯ ಚುರುಕುತನವನ್ನು ಕಳೆದುಕೊಳ್ಳುತ್ತದೆ...... ತೋರಿಕೆಯ ಮನಸ್ಸಿನ ಹಲವು ಚಟುವಟಿಕೆಗಳ ಬಗ್ಗೆ ನೀವು ಅರಿವುಳ್ಳವರಾದರೆ, ಅದರ ಗೊಣಗಾಟಗಳು, ಕುಣಿದಾಟಗಳು, ತೀರ್ಮಾನಗಳು ಇತ್ಯಾದಿಗಳನ್ನು ಈ ಅರಿವಿನಿಂದ ಗಮನಿಸಿದರೆ ಆಗ ಶಾಂತಿ ಹಾಗೂ ಸ್ಪಷ್ಟತೆ ಒದಗುತ್ತದೆ.

Poona,
19 September 1948;
The Collected Works, Vol. V.

ಆದುದರಿಂದ ಮುಖ್ಯವಾದ ಸಂಗತಿ ಎಂದರೆ..... ಸ್ವಜ್ಞಾನ. ತನ್ನ ತಾನರಿಯದೆ ಜಗತ್ತಿನಲ್ಲಿ ವ್ಯವಸ್ಥೆ ಇರಲಾರದು. ಚಿಂತನೆ, ಭಾವನೆ ಮತ್ತು ಕ್ರಿಯೆಗಳನ್ನು ತನ್ನಲ್ಲೇ ಶೋಧಿಸದೆ ಹೋದರೆ, ವಿಶ್ವ ಶಾಂತಿ, ವ್ಯವಸ್ಥೆ ಹಾಗೂ ಭದ್ರತೆ ಕಂಡು ಬರಲಾರದು. ಆದುದರಿಂದ ಸ್ವ ಅಧ್ಯಯನ ಬಹಳ ಮುಖ್ಯ ಮತ್ತು ಅದು ಪಲಾಯನದ ಪ್ರಕ್ರಿಯೆಯಲ್ಲ.

ತನ್ನನ್ನು ತಾನು ಅಧ್ಯಯನ ಮಾಡುವುದು ನಿಷ್ಕ್ರಿಯೆ ಅಲ್ಲ. ತಾನು ಮಾಡುವ ಪ್ರತಿ ಕೆಲಸದಲ್ಲೂ ಅಸಾಧಾರಣ ಎಚ್ಚರ ಇರಬೇಕು.ತೀರ್ಪು ನೀಡದ, ದೂಷಣೆರಹಿತ ಹಾಗೂ ಖಂಡನೆರಹಿತ ಜಾಗೃತಿ ಬೇಕಾಗುತ್ತದೆ. ನಿತ್ಯ ಜೀವನ ಸಾಗಿಸುತ್ತಾ ತನ್ನ ಬಗೆಗಿನ ಒಟ್ಟು ಪ್ರಕ್ರಿಯೆಯ ಈ ಅರಿವು ಹೊಂದುವುದು ಸಂಕುಚಿತವಾಗುವುದಲ್ಲ, ಬದಲಾಗಿ ಸದಾ ವಿಸ್ತಾರಗೊಳ್ಳುವುದು, ಸದಾ ಸ್ಪಷ್ಟವಾಗುವುದು. ಈ ಅರಿವಿನಿಂದ ಮೊದಲು ತನ್ನಲ್ಲಿ ಮತ್ತೆ ಹೊರ ಜಗತ್ತಿನೊಂದಿಗಿನ ಸಂಬಂಧಗಳಲ್ಲಿ ವ್ಯವಸ್ಥೆ ಹೊರಹೊಮ್ಮುತ್ತದೆ.

ನಿಜವಾದ ಬಿಕ್ಕಟ್ಟು

Montevideo, 26 June 1935; The Collected Works, Vol. II.

ನಿಮಗೆ ನೋವಿಲ್ಲದಿದ್ದರೆ, ನೀವು ಸಂಘರ್ಷದಲ್ಲಿ ಸಿಲುಕಿಕೊಂಡಿರದಿದ್ದರೆ, ನಿಮಗೆ ಯಾವ ಸಮಸ್ಯೆಯೂ ಇಲ್ಲದಿದ್ದರೆ ನಿಮ್ಮ ಬದುಕಿನಲ್ಲಿ ಬಿಕ್ಕಟ್ಟೇ ಇಲ್ಲದಿದ್ದರೆ ಹೇಳುವುದಕ್ಕೆ ಹೆಚ್ಚಿಗೆ ಏನೂ ಇಲ್ಲ. ಅಂದರೆ, ನೀವು ನಿದ್ರೆ ಮಾಡಿಕೊಂಡಿದ್ದರೆ, ಜೀವನದ ಮೊದಲ ಕೆಲಸವೇ ನಿಮ್ಮನ್ನು ಎಚ್ಚರಗೊಳಿಸುವುದು. ಆದರೆ ಸಾಮಾನ್ಯವಾಗಿ ನೀವು ಯಾತನೆ ಅನುಭವಿಸುವಾಗ ಏನಾಗುತ್ತದೆ? ನೀವು ಒಡನೆಯೆ ನಿಮ್ಮ ಸಮಸ್ಯೆಗೆ ಪರಿಹಾರ ಅರಸುತ್ತೀರಿ. ಹೀಗಾಗಿ ಕ್ರಮೇಣ ನೀವು ಸುಖವನ್ನು ಅರಸುತ್ತೀರಿ, ನಿಮ್ಮ ಪ್ರಯತ್ನಗಳ ಮೂಲಕ ಮತ್ತೊಮ್ಮೆ ನಿದ್ರೆಗೆ ಜಾರುತ್ತೀರಿ...... ಆಘಾತಕ್ಕೆ ಒಳಗಾಗಿ ಮನಸ್ಸು ಎಚ್ಚೆತ್ತಾಗ ನೀವು ಅದನ್ನು ಕಷ್ಟ, ಯಾತನೆ ಅನ್ನುತ್ತೀರಿ. ಸುಖವನ್ನು ಬಯಸದೆ ನಿಮ್ಮ ಯಾತನೆಗೆ ಕಾರಣವನ್ನು ಶೋಧಿಸುವ ನಿಜವಾದ ಗಳಿಗೆ ಇದುವೇ.

*Ojai,
18 June 1934;
The Collected
Works, Vol. II.*

ಆವರಣ ಮತ್ತು ಸ್ವದ ನಡುವಿನ ಸಂಘರ್ಷದ ಅರಿವು ನಿಮಗಿಲ್ಲದಿದ್ದರೆ, ಆ ಹೋರಾಟದ ಎಚ್ಚರ ನಿಮ್ಮಲ್ಲಿಲ್ಲದಿದ್ದರೆ ನೀವು ಇನ್ನೂ ಮತ್ತೂ ಪರಿಹಾರ ಏಕೆ ಅರಸುತ್ತೀರಿ? ಹಾಗೆ ಅಪ್ರಜ್ಞಾಪೂರ್ವಕವಾಗಿಯೇ ಇರಿ. ಅಗತ್ಯವಾದ ಸಂಘರ್ಷವನ್ನು ಸನ್ನಿವೇಶಗಳು ತಾವಾಗಿಯೇ ಸೃಷ್ಟಿಸಲಿ. ನೀವೇಕೆ ಮುನ್ನುಗ್ಗುತ್ತೀರಿ? ನಿಮ್ಮ ಹೃನ್ಮನಗಳಲ್ಲಿ ಇಲ್ಲದ ಸಂಘರ್ಷವನ್ನು ನೀವೇಕೆ ಕೃತಕವಾಗಿ, ಹುಸಿಯಾಗಿ ಸೃಷ್ಟಿಸುತ್ತೀರಿ? ನೀವೇನೋ ಕಳೆದುಕೊಳ್ಳುತ್ತಿದ್ದೀರಿ ಎಂದು ನಿಮಗೆ ಭಯ; ಅದಕ್ಕೇ ನೀವು ಕೃತ್ರಿಮವಾಗಿ ಸಂಘರ್ಷವನ್ನು ಹುಟ್ಟುಹಾಕುತ್ತಿದ್ದೀರಿ. ಆದರೆ ಜೀವನ ನಿಮ್ಮನ್ನು ಕಳೆದುಕೊಳ್ಳುವುದಿಲ್ಲ.

ನಿಜವಾದ ಬಿಕ್ಕಟ್ಟು

Varanasi,
16 December 1952;
The Collected Works, Vol. VII.

ನೀವು ಮನೆಯ ಬಾಗಿಲು, ಕಿಟಕಿಗಳನ್ನು ಮುಚ್ಚಿ ಒಳಗೇ ವಾಸಮಾಡುವಾಗ ಸುರಕ್ಷಿತವಾಗಿದ್ದೀರಿ, ಆಕ್ರಮಣಕ್ಕೆ ಒಳಗಾಗಿಲ್ಲ ಎಂದು ಭಾವಿಸುತ್ತೀರಿ. ಆದರೆ ಜೀವನ ಹಾಗಲ್ಲ. ಜೀವನ ಸತತವಾಗಿ ಬಾಗಿಲು ಬಡಿಯುತ್ತಿದೆ, ಕಿಟಕಿ ಬಾಗಿಲುಗಳನ್ನು ದೂಡಿ ಸದಾ ತೆರೆದಿಡಲು ಯತ್ನಿಸುತ್ತದೆ. ಇದರಿಂದಾಗಿ ನೀವು ಎಲ್ಲವನ್ನೂ ನೋಡಬಹುದು. ಆದರೆ ನೀವು ಭಯದಿಂದ ಕಿಟಕಿಗಳನ್ನು ಮುಚ್ಚಿದರೆ ಕದ ಬಡಿಯುವಿಕೆಯ ಸದ್ದು ಹೆಚ್ಚುತ್ತದೆ. ಹೀಗಾಗಿ ನೀವು ಹೆಚ್ಚು ಹೆಚ್ಚು ಹೊರಗಿನ ಭದ್ರತೆಗಳಿಗೆ ಅಂಟಿಕೊಂಡರೆ ಜೀವನ ಹೆಚ್ಚಿನ ಪ್ರಮಾಣದಲ್ಲಿ ಬಂದು ನಿಮ್ಮನ್ನೇ ದಬ್ಬುತ್ತದೆ.

Madras,
29 December 1979;
The Seed of a Million Years.

ಹಾಗಾದರೆ ಯಾವುದು ನಿಮ್ಮನ್ನು ಬದಲಾಯಿಸುತ್ತದೆ? ಬಿಕ್ಕಟ್ಟು? ತಲೆಗೆ ಏಟು? ದುಃಖ? ಕಣ್ಣೀರು? ಬಿಕ್ಕಟ್ಟಿನ ಮೇಲೆ ಬಿಕ್ಕಟ್ಟು- ಇದೆಲ್ಲ ಆಗಿ ಹೋಗಿದೆ. ನೀವು ಸತತವಾಗಿ ಕಣ್ಣೀರು ಸುರಿಸಿದ್ದೀರಿ, ಆದರೆ ಯಾವುದೂ ನಿಮ್ಮನ್ನು ಬದಲಾಯಿಸಿದಂತಿಲ್ಲ. ಏಕೆಂದರೆ ನೀವು ಯಾರನ್ನೋ ಅವಲಂಬಿಸಿದ್ದೀರಿ. ’ನಾನು ಕಂಡು ಹಿಡಿಯುತ್ತೇನೆ’ ಎಂದು ಯಾರೂ ಹೇಳುತ್ತಿಲ್ಲ.

ನಿಜವಾದ ಬಿಕ್ಕಟ್ಟು



Bombay,
14 December 1969.

ನಿಮ್ಮ ಬದುಕಿನಲ್ಲಿ ಏನು ಮಾಡಿದ್ದೀರಿ?..... ನಿಮಗೆ ಈ ಜೀವನ ದೊರೆತಿದೆ. ದುಃಖ, ಸುಖ, ಭಯ, ಅಪರಾಧ ಭಾವ, ಸಕಲ ಹಿಂಸೆಗಳು, ಒಂಟಿತನ , ನಿರಾಸೆ ಮತ್ತು ಬದುಕಿನ ಚೆಲುವು ಎಲ್ಲವನ್ನೂ ಒಳಗೊಂಡ ಅಸಾಮಾನ್ಯವಾದ ಒಂದು ಜೀವನ ನಿಮಗೆ ಸಿಕ್ಕಿದೆ. ನೀವು ಏನು ಮಾಡಿದ್ದೀರಿ? ನೀವು ಈ ಪ್ರಶ್ನೆ ಕೇಳಿಕೊಂಡು ದುಃಖದಿಂದ ಹಾಸಿಗೆಗೆ ಒರಗಬೇಡಿ.ಏಕೆಂದರೆ ನೀವು ಏನೂ ಮಾಡಿಲ್ಲ, ನೀವು ಖಂಡಿತವಾಗಿಯೂ ಏನೂ ಮಾಡಿಲ್ಲ. ಲೋಕದಲ್ಲಿ ಅತ್ಯಮೂಲ್ಯವಾದ ಜೀವನ ನಿಮಗೆ ಸಿಕ್ಕಿದೆ, ನೀವೇನು ಮಾಡಿದ್ದೀರಿ? ನೀವು ಅದನ್ನು ಭ್ರಷ್ಟಗೊಳಿಸಿದ್ದೀರಿ, ಹಿಂಸಿಸಿದ್ದೀರಿ, ಚಿಂದಿಚಿಂದಿ ಮಾಡಿದ್ದೀರಿ, ಅದನ್ನು ಒಡೆದಿದ್ದೀರಿ, ಹಿಂಸೆಯನ್ನು ಉಂಟು ಮಾಡಿದ್ದೀರಿ, ನಾಶ ಮಾಡಿದ್ದೀರಿ, ಯಾವುದೇ ಪ್ರೇಮ, ಕರುಣೆ,ಭಾವತೀವ್ರತೆಯಿಲ್ಲದೆ ದ್ವೇಷ ಸಾಧಿಸಿದ್ದೀರಿ. ನೀವು ನಿಮ್ಮ ಬದುಕನ್ನು ಏನು ಮಾಡಿದ್ದೀರಿ ಎಂದು ನಿಮ್ಮನ್ನೇ ನೀವು ಕೇಳಿಕೊಂಡರೆ ನಿರ್ವಾಹವಿಲ್ಲದೆ ಕಣ್ಣೀರು ಸುರಿಸುತ್ತೀರಿ. ಆದರೆ ನೀವು ಹಿಂದಿನದನ್ನು, ಹಿಂದೆ ಏನು ಮಾಡಿದ್ದಿರಿ ಎಂಬುದನ್ನು ಎಣಿಸಿ ಕಣ್ಣೀರುಗರೆಯುತ್ತೀರಿ: ಇದು ಆತ್ಮ ಮರುಕದ ಕಣ್ಣೀರು.

ನಿಜವಾದ ಬಿಕ್ಕಟ್ಟು

Ojai,
17 June 1945;
The Collected Works, Vol.IV.

ಉಲ್ಲಾಸ ಮತ್ತು ಸಂಭ್ರಮ ತಮ್ಮಷ್ಟಕ್ಕೆ ತಾವೇ ಗುರಿಗಳಲ್ಲ; ಎದೆಗಾರಿಕೆ ಮತ್ತು ಭರವಸೆಯ ಹಾಗೆ ಅವು ಏನೋ ಒಂದರ ಹುಡುಕಿಕೆಯಲ್ಲಿ ಸಿಗುವ ಆಕಸ್ಮಿಕಗಳು. ಈ ಹುಡುಕಾಟ ಸ್ವಯಂ ಒಂದು ಗುರಿ. ಈ ಗುರಿಯನ್ನು ತಾಳ್ಮೆಯಿಂದ ಶ್ರಮಪಟ್ಟು ಬಯಸಬೇಕು. ಇದರ ಹುಡುಕಾಟದಲ್ಲೇ ನಮ್ಮ ತೊಳಲಾಟ ಮತ್ತು ನೋವು ನಶಿಸುತ್ತದೆ. ಅದರ ಶೋಧನೆಯ ಪಯಣ ನಮ್ಮೊಳಗೇ ಆಗಬೇಕು; ಬೆರೆಲ್ಲ ಪಯಣಗಳೂ ವಿಕರ್ಷಕಗಳಾಗಿದ್ದು ಅಜ್ಞಾನ ಹಾಗೂ ಭ್ರಮೆಯನ್ನು ಉಂಟುಮಾಡುತ್ತವೆ. ನಮ್ಮೊಳಗೆ ನಡೆಯುವ ಪಯಣವನ್ನು ಗುರಿ ಸಾಧನೆಗಾಗಿ ,ಸಂಘರ್ಷ ಮತ್ತು ದುಃಖದ ಪರಿಹಾರಕ್ಕಾಗಿ ಕೈಗೊಳ್ಳಬಾರದು; ಏಕೆಂದರೆ ಶೋಧನೆಯೇ ಭಕ್ತಿ ಮತ್ತು ಸ್ಫೂರ್ತಿ.

ನಿಜವಾದ ಬಿಕ್ಕಟ್ಟು

Think on These Things, Ch:26.

ನಾವು ಅಖಂಡ ಮಾನವತೆ; ನಾವು ಹಂಚಿಕೊಳ್ಳಲು ಈ ನೆಲವಿದೆ, ಅದು ಪ್ರೀತಿ ಮತ್ತು ಕಾಳಜಿಯಿಂದ ನಮಗೆಲ್ಲರಿಗೆ ಆಹಾರ, ಬಟ್ಟೆ ಮತ್ತು ಆಸರೆ ನೀಡುತ್ತದೆ. ಹೀಗಾಗಿ ಕೆಲವು ಪರೀಕ್ಷೆಗಳನ್ನು ಪಾಸು ಮಾಡುವುದೇ ಶಿಕ್ಷಣದ ಉದ್ದೇಶವಲ್ಲ, ಬದಲಾಗಿ ಈ ಒಟ್ಟು ಬದುಕಿನ ಸಮಸ್ಯೆಯನ್ನು ನಿಮಗೆ ಅರ್ಥ ಮಾಡಿಸುವುದು ಅದರ ಉದ್ದೇಶ....... ದೇವರು ಅಂದರೆ ಯಾರು, ಏನು ಎಂದು ಕಂಡುಕೊಳ್ಳುವುದು ಕೂಡಾ ನಮ್ಮ ಸಮಸ್ಯೆ. ಏಕೆಂದರೆ ಅದೇ ನಮ್ಮ ಬದುಕಿನ ಮೂಲಾಧಾರ. ಭದ್ರ ಬುನಾದಿ ಇಲ್ಲದಿದ್ದರೆ ಮನೆ ಬಹುಕಾಲ ಉಳಿಯಲಾರದು. ದೇವರು ಅಥವಾ ಸತ್ಯ ಅಂದರೇನು ಎಂಬುದನ್ನು ಅರಸದಿದ್ದರೆ ಮನುಷ್ಯನ ಸಕಲ ಕುಟಿಲ ಆವಿಷ್ಕಾರಗಳು ಅರ್ಥಹೀನವಾಗುತ್ತವೆ.

ನಿಜವಾದ ಬಿಕ್ಕಟ್ಟು

Think on These Things, Ch:17.

ಈ ಎಲ್ಲ ಕಾರ್ಯಗಳು ವಿನಾಶ ಹಾಗೂ ನೋವಿಗೆ , ಗೊಂದಲ ಮತ್ತು ನಿರಾಸೆಗೆ ಕಾರಣವಾಗುತ್ತವೆ ಎಂಬುದು ನಿಮಗೆ ತಿಳಿಯುತ್ತದೆ. ಅಪಾರ ಬಡತನ, ರೋಗರುಜಿನ ಮತ್ತು ಹಸಿವು ಇವುಗಳ ಜೊತೆಜೊತೆಯಲ್ಲೇ ಜೆಟ್ ವಿಮಾನಗಳು,ರೆಫ್ರಿಜಿರೇಟರ್ ಮುಂತಾದ ಭಾರಿ ಸೌಕರ್ಯಗಳಿವೆ.ಇವೆಲ್ಲವೂ ಮನುಷ್ಯ ಕೃತ.ಇದನ್ನೆಲ್ಲ ನೋಡುವಾಗ " ಇಷ್ಟೇನಾ? ಮನುಷ್ಯನ ನಿಜವಾದ ಕಾರ್ಯ ಇನ್ನೇನೂ ಇಲ್ಲವೆ?" ಎಂದು ನಿಮ್ಮನ್ನು ನೀವು ಪ್ರಶ್ನೆ ಮಾಡಿಕೊಳ್ಳುವುದಿಲ್ಲವೆ? ಮನುಷ್ಯನ ನಿಜವಾದ ಸಾಧನೆ ಏನು ಎಂಬುದನ್ನು ನಾವು ಕಂಡುಕೊಂಡರೆ ಆಗ ಜೆಟ್ ವಿಮಾನಗಳು, ಬಟ್ಟೆ ಒಗೆವ ಯಂತ್ರಗಳು, ಸೇತುವೆಗಳು, ಹಾಸ್ಟೆಲ್ ಗಳು ಇವೇ ಮುಂತಾದವುಗಳಿಗೆ ತೀರ ಬೇರೆಯೇ ಅರ್ಥ ಬರುತ್ತದೆ. ಆದರೆ ಮನುಷ್ಯನ ನಿಜವಾದ ಕಾರ್ಯ ಏನು ಎಂಬುದನ್ನು ಕಂಡು ಹಿಡಿಯದೆ,ಸುಮ್ಮನೆ ಸುಧಾರಣೆಗಳನ್ನು ಮಾಡುವುದು,ಮನುಷ್ಯ ಈಗಾಗಲೇ ಮಾಡಿದ್ದನ್ನು ಪುನಃ ರೂಪಿಸುವುದು ನಮ್ಮನ್ನು ಎಲ್ಲಿಗೂ ಕರೆದೊಯ್ಯಲಾರದು.

ಹೀಗಾಗಿ ಮನುಷ್ಯನ ನಿಜವಾದ ಕಾರ್ಯ ಏನು? ನಿಶ್ಚಯವಾಗಿಯೂ ಮನುಷ್ಯನ ನಿಜವಾದ ಕಾರ್ಯವೆಂದರೆ ಸತ್ಯವನ್ನು, ದೇವರನ್ನು ಕಂಡುಕೊಳ್ಳುವುದು; ಹಾಗೆಂದರೆ ಪ್ರೀತಿಸುವುದು, ತನ್ನನ್ನು ಸೆರೆಯಾಗಿಸುವ ಚಟುವಟಿಕೆಗಳಲ್ಲಿ ತೊಡಗದಿರುವುದು.ನಿಜವಾದ ಶೋಧನೆಯಲ್ಲಿ ಪ್ರೇಮವಿದೆ; ಮನುಷ್ಯ ಮನುಷ್ಯರ ನಡುವಿನ ಸಂಬಂಧಗಳಲ್ಲಿನ ಈ ಪ್ರೇಮವೇ ಒಂದು ವಿಭಿನ್ನವಾದ ನಾಗರಿಕತೆಯನ್ನು, ಹೊಸ ಜಗತ್ತನ್ನು ಸೃಷ್ಟಿಸಲಿದೆ.

ನಿಜವಾದ ಬಿಕ್ಕಟ್ಟು

Think on These Things, Ch:11.

ಸತ್ಯ ಮತ್ತು ದೇವರು ಅಂದರೆ ಏನು ಎಂಬುದನ್ನು ಕಂಡುಕೊಳ್ಳುವುದೇ ನಿಜವಾದ ತುಡಿತ, ಉಳಿದುದೆಲ್ಲ ಆನುಷಂಗಿಕ ತುಡಿತಗಳು. ನಿಶ್ಚಲವಾದ ನೀರಿಗೆ ನೀವೊಂದು ಕಲ್ಲನ್ನು ಎಸೆದಾಗ ನೀರಿನಲ್ಲಿ ಅಲೆಯ ಉಂಗುರಗಳು ಮೂಡುತ್ತವೆ. ಈ ಉಂಗುರಗಳು ಆನುಷಂಗಿಕ ಚಲನೆಗಳು, ಸಾಮಾಜಿಕ ಪ್ರತಿ ಸ್ಪಂದನಗಳು, ಆದರೆ ನಿಜವಾದ ಚಲನೆ ಕೇಂದ್ರದಲ್ಲಿದೆ. ಈ ಚಲನೆಯೇ ಸಂತೋಷ, ದೇವರು, ಸತ್ಯವನ್ನು ಕಂಡುಕೊಳ್ಳುತ್ತದೆ; ಆದರೆ ನೀವು ಭಯ, ಬೆದರಿಕೆಗಳಲ್ಲಿ ಸಿಲುಕಿಕೊಂಡಷ್ಟು ಹೊತ್ತು ಅದನ್ನು ಕಂಡುಕೊಳ್ಳಲು ಸಾಧ್ಯವಿಲ್ಲ. ಭಯ ಮತ್ತು ಬೆದರಿಕೆ ಕಂಡುಬಂದ ಗಳಿಗೆಯಿಂದ ಸಂಸ್ಕೃತಿ ಕುಸಿಯುತ್ತದೆ.

ಆದುದರಿಂದಲೇ ನೀವು ಎಳೆಯವರಾಗಿರುವಾಗಲೇ ಅನುಬಂಧನಕ್ಕೆ ಒಳಗಾಗಬಾರದು, ನಿಮ್ಮ ಹೆತ್ತವರಿಗೆ, ಸಮಾಜಕ್ಕೆ ಹೆದರಬಾರದು. ಇದು ಬಹಳ ಮುಖ್ಯ ಹಾಗೆ ಆದಲ್ಲಿ ಸತ್ಯವೆಂದರೆ ಏನು ಎಂಬುದನ್ನು ಕಂಡುಕೊಳ್ಳುವ ಈ ಕಾಲಾತೀತ ಚಲನೆ ನಿಮ್ಮಲ್ಲಿರುತ್ತದೆ. ಸತ್ಯವನ್ನು ಅರಸುವ, ದೇವರನ್ನು ಅರಸುವ ಮಂದಿ ಅಂಥ ಮಂದಿ ಮಾತ್ರವೇ ಒಂದು ಹೊಸ ನಾಗರಿಕತೆಯನ್ನು, ಹೊಸ ಸಂಸ್ಕೃತಿಯನ್ನು ಕಟ್ಟಬಲ್ಲರು.

ನಿಜವಾದ ಬಿಕ್ಕಟ್ಟು

Think on These Things, Ch:27.

ನಿಜವಾಗಿಯೂ ಧಾರ್ಮಿಕನಾದ ಮನುಷ್ಯ ಸುಧಾರಣೆ ಬಗ್ಗೆ ಕಳಕಳಿ ಉಳ್ಳವನಲ್ಲ, ಕೇವಲ ಸಾಮಾಜಿಕ ವ್ಯವಸ್ಥೆಯಲ್ಲಿ ಬದಲಾವಣೆ ಉಂಟು ಮಾಡುವುದರಲ್ಲಿ ಅವನಿಗೆ ಆಸಕ್ತಿ ಇಲ್ಲ; ಇದಕ್ಕೆ ಬದಲಾಗಿ ನಿಜ ಏನು ಎಂಬುದನ್ನು ಅವನು ಶೋಧಿಸುತ್ತಾನೆ. ಈ ಶೋಧನೆಯೇ ಸಮಾಜದ ಮೇಲೆ ಪರಿವರ್ತನೆಯ ಪ್ರಭಾವ ಬೀರುತ್ತದೆ. ಆದುದರಿಂದಲೇ ಶಿಕ್ಷಣವು ಒಂದು ನಿರ್ದಿಷ್ಟ ಬಗೆಯ ಸಮಾಜಕ್ಕೆ ವಿದ್ಯಾರ್ಥಿ ಹೊಂದಿಕೊಳ್ಳಲು ಅಣಿಗೊಳಿಸುವುದಕ್ಕೆ ಸೀಮಿತವಾಗದೆ ಮೂಲತಃ ಸತ್ಯ ಅಥವಾ ದೇವರನ್ನು ಅರಸಲು ಬೆಂಬಲ ನೀಡಬೇಕು.

ನಿಜವಾದ ಬಿಕ್ಕಟ್ಟು

*Saanen,
3 August 1975.*

ಭ್ರಷ್ಟವಾಗದ ಚಿರಂತನ ಪಾವಿತ್ರ್ಯವನ್ನು ನಾವು ಕಂಡುಕೊಳ್ಳಬೇಕು. ಕರುಣೆ ಇದ್ದಾಗ ಇದು ಸಾಧ್ಯ; ಅಂದರೆ ನಿಮ್ಮ ಮತ್ತು ಜಗತ್ತಿನ ಒಟ್ಟು ಕಷ್ಟ ಕಾರ್ಪಣ್ಯಗಳ ಒಟ್ಟು ಮಹತ್ವವನ್ನು ನೀವು ಗ್ರಹಿಸಿದಾಗ ಈ ಪಾವಿತ್ರ್ಯ ನಿಮಗೆ ಒದಗುತ್ತದೆ. ಲೋಕದ ಕಷ್ಟವೇ ನಿಜ; ಅದು ಬಹುಕಾಲದಿಂದ ಇದೆ. ಅದು ಭಾವಾತಿರೇಕವಲ್ಲ, ರಮ್ಯವಾದ ವಿಚಾರದ ಹೊಯ್ದಾಟವಲ್ಲ . ಅದು ನಮ್ಮೊಳಗೆ ಇರುವಂತೆ ಯಥಾರ್ಥದಲ್ಲಿ ಇದೆ. ಆ ಕಷ್ಟಗಳ ಜೊತೆ ಬದುಕಬೇಕು, ಅದರಿಂದ ಪಲಾಯನ ಮಾಡದೆ ಕೊನೆ ತನಕ ಅನುಭವಿಸಬೇಕು. ನೀವು ಪಲಾಯನ ಮಾಡದಿದ್ದರೆ ಅದನ್ನು ಎದುರಿಸುವ ಅಸಾಧಾರಣ ಚೈತನ್ಯ ನಿಮ್ಮಲ್ಲಿ ಕಂಡುಬರುತ್ತದೆ. ಆಗ ಮಾತ್ರವೇ ನೀವು ಅದನ್ನು ಮಾಡಬಹುದು........ ಕಷ್ಟಕೋಟಲೆಗಳ ಒಟ್ಟು ಅರ್ಥವನ್ನು ಗ್ರಹಿಸಿದಾಗಲೇ ಕಾರುಣ್ಯ ಮೂಡುತ್ತದೆ, ಇಲ್ಲಿಂದ ಕಷ್ಟಗಳಿರುವುದಿಲ್ಲ. ಕರುಣಾರ್ದ್ರ ಮನಸ್ಸು ಮಾತ್ರವೇ ಧೇನಿಸಿ ಚಿರಂತನ ಪಾವಿತ್ರ್ಯವನ್ನು ಕಂಡುಕೊಳ್ಳಬಲ್ಲುದು.

Think on These Things, Ch:17.

ಸತ್ಯದ, ದೇವರ ಶೋಧನೆ, ಪೂರ್ಣ ಉತ್ತಮನಾಗಿರುವುದು ಅಂದರೆ ಉತ್ತಮಿಕೆ ಹಾಗು ವಿನಮ್ರತೆಯನ್ನು ರೂಢಿಸದಿರುವುದು, ಅದಕ್ಕೆ ಬದಲಾಗಿ ಮನಸ್ಸಿನ ಜಾಣ್ಮೆ ಹಾಗೂ ಆವಿಷ್ಕಾರಗಳನ್ನು ದಾಟಿ ಏನನ್ನೋ ಅರಸುವುದು ಅಂದರೆ ಅದರ ಬಗ್ಗೆ ಭಾವನೆ ಹೊಂದಿರುವುದು, ಅದರಲ್ಲೇ ಬದುಕುವುದು, ಅದೇ ಆಗುವುದು- ಇದು ನಿಜವಾದ ಧರ್ಮ. ನಿಮಗಾಗಿ ನೀವು ತೋಡಿದ ಹೊಂಡದಿಂದ ಮೇಲೆದ್ದು ಜೀವನದ ನದಿಯಲ್ಲಿ ಇಳಿದಾಗ ಇದು ಸಾಧ್ಯ. ಆಗ ಬದುಕು ವಿಸ್ಮಯಕರ ರೀತಿಯಲ್ಲಿ ನಿಮ್ಮನ್ನು ಪೋಷಿಸುತ್ತದೆ.ಏಕೆಂದರೆ ಆಗ ನಿಮ್ಮನ್ನು ನೀವು ಪೋಷಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಬದುಕು ತನಗೆ ಇಷ್ಟ ಬಂದ ಕಡೆಗೆ ನಿಮ್ಮನ್ನು ಕರೆದೊಯ್ಯುತ್ತದೆ. ಏಕೆಂದರೆ ನೀವು ಅದರ ಭಾಗವಾಗಿರುತ್ತೀರಿ;ಹೀಗಾಗಿ ಭದ್ರತೆಯ, ಜನ ಏನು ಹೇಳುತ್ತಾರೆ ಅಥವಾ ಹೇಳುವುದಿಲ್ಲ ಎಂಬ ಸಮಸ್ಯೆ ಇರುವುದಿಲ್ಲ. ಇದೇ ಬದುಕಿನ ಸೊಬಗು.

ನಿಜವಾದ ಬಿಕ್ಕಟ್ಟು

The World Within,
Ch.76.

ನಿಜವನ್ನು ಅರಸುವಾಗ ರೊಟ್ಟಿಯನ್ನು ನೀಡಲಾಗುತ್ತದೆ;ಆದರೆ ನಾವು ರೊಟ್ಟಿಯನ್ನು ಮಾತ್ರವೇ ಬಯಸಿದರೆ ಅದೂ ನಾಶವಾಗುತ್ತದೆ. ರೊಟ್ಟಿಯೇ ಆತ್ಯಂತಿಕ ಮೌಲ್ಯವಲ್ಲ; ನಾವು ಅದನ್ನು ಆತ್ಯಂತಿಕ ಮೌಲ್ಯವನ್ನಾಗಿ ಪರಿವರ್ತಿಸಿದಾಗ ವಿಪತ್ತು, ಕೊಲೆ ಸುಲಿಗೆ ಹಾಗು ಹಸಿವಿನ ಹಾಹಾಕಾರ ಕೇಳಿಬರುತ್ತದೆ.

ನಶ್ವರತೆಯ ಮುಖೇನ ಚಿರಂತನವನ್ನು ಅರಸಿ.ಅದಕ್ಕೆ ದಾರಿಗಳಿಲ್ಲ,ಏಕೆಂದರೆ ಅದು ನಿತ್ಯ ವರ್ತಮಾನ.

The World Within, Ch:19.

ಇರುವುದು ಯಥಾರ್ಥ ಮಾತ್ರ, ಅದ್ವೈತವಾದ ಪರಮ ಸತ್ಯ ಮಾತ್ರ. ಇರುವುದೊಂದೇ ಮಾನವತೆ ಮತ್ತು ಸದಾಚಾರ, ಯಾವುದೇ ಮಾರ್ಗದ ಮೂಲಕ, ನಿಮ್ಮನ್ನು ಹೊರತುಪಡಿಸಿ ಇನ್ನಾವುದೇ ವ್ಯಕ್ತಿಯ ಮೂಲಕ ನೀವು ಇದನ್ನು ಸಾಕ್ಷಾತ್ಕರಿಸಲಾರಿರಿ. ನಿಮ್ಮ ಮೋಕ್ಷವನ್ನು ನೀವೇ ಅರಸಿ, ಆಗ ನೀವು ಈ ಪ್ರಪಂಚವನ್ನು ಅದರ ಗೊಂದಲ, ಸಂಘರ್ಷ, ದುಃಖ ಹಾಗು ವೈರತ್ವದಿಂದ ಮುಕ್ತಗೊಳಿಸ ಬಲ್ಲಿರಿ.



Rishi Valley,
16 December 1984.

ನೀವೊಂದು ಪ್ರಶ್ನೆ ಎತ್ತಿದಿರಿ: ಪವಿತ್ರ ಅಂದರೆ ಏನು? ಅದನ್ನು ಕಂಡುಕೊಳ್ಳದೆ , ಅದಕ್ಕೆ ಅಭಿಮುಖವಾಗದೆ - ನೀವು ಅದನ್ನು ಕಂಡುಕೊಳ್ಳದೆ- ಅದು ರೂಪ ತಳೆಯದೆ, ನೀವು ಒಂದು ಹೊಸ ಸಂಸ್ಕೃತಿಯನ್ನು, ಹೊಸ ಮನುಷ್ಯನ ಲಕ್ಷಣವನ್ನು ಕಾಣಲಾರಿರಿ.

ನಿಜವಾದ ಬಿಕ್ಕಟ್ಟು

Madras, 22 October 1947; The Collected Works, Vol. IV.

ನಿಮಗೆ ನೀವೇ ಬೆಳಕು....... ಕರಗಳು ಅಥವಾ ಮನಸ್ಸು ಸೃಷ್ಟಿಸಿದ ಪದಾರ್ಥಗಳಿಂದ ನಮಗೆ ಯಾವ ಭರವಸೆಯೂ ದಕ್ಕದು. ನಾವು ಪಲಾಯನ ಮಾಡುತ್ತಿಲ್ಲ; ಪ್ರಪಾತದ ಅಂಚಿನಲ್ಲಿ ನಡೆಯುತ್ತಿರುವ ಯಾವುದೇ ಚಟುವಟಿಕೆಯಿಂದ ಅಧಃಪತನವೇ ಗತಿ ಎಂದು ಸೂಚಿಸುತ್ತಿದ್ದೇವೆ. ಪ್ರಪಾತದ ಆಚೆಗೆ ಮಾತ್ರವೇ ಸಂತಸ ಹಾಗೂ ರಕ್ಷಣೆ ಇದೆ. ಇದನ್ನು ಮನಗಂಡ ಕೆಲವರು ಅಸ್ತವ್ಯಸ್ತತೆಯ ಕೂಪದಿಂದಾಚೆಗೆ ಜ್ಞಾನೋದಯದ ಕೇಂದ್ರಗಳನ್ನು ರೂಪಿಸಬೇಕು. ಸದ್ಯದ ಬಿಕ್ಕಟ್ಟು ಹಾಗೂ ಮಾನವನ ಸಕಲ ಸಮಸ್ಯೆಗಳಿಂದ ಹೊರಬರಲು ದಾರಿ ಇದೆ; ಅದು ಪಲಾಯನ ಮಾರ್ಗವಲ್ಲ, ಅದು ಚಿರಂತನ ಶಾಂತಿಯ ಕಡೆಗೆ ನಮ್ಮನ್ನು ಕರೆದೊಯ್ಯುವ ಮಾರ್ಗ.

Krishnamurti Foundation India
Vasanta Vihar, 124, Greenways Road, Chennai -600028
Tel: 91-44-24937803 / 24937596 I info@kfionline.org I www.kfionline.org